ತರುಣ ಪೊಲೀಸರಿಗೊಂದು ಮನವಿ: ಈ ಸರ್ಕಾರ ನಿಮ್ಮ ಪೊಲೀಸ್ ಸೋದರರನ್ನೇ ಕೊಂದಿದೆ. ಬನಾರಸ್‌ನಲ್ಲಿ ಮೂವರು ಭಾರತೀಯ ಪೊಲೀಸರು ಜನರ ಮೇಲೆ ಗುಂಡು ಹಾರಿಸಲು ಒಪ್ಪಲಿಲ್ಲ. ಆಗ ಬಿಳಿಯ ಸೈನಿಕರು ಈ ಪೊಲೀಸರನ್ನೇ ಕೊಂದರು. ಜೆಮ್‌ಶೆಡ್‌ಪುರದಲ್ಲಿ ಅತಿ ಹೆಚ್ಚು ಜನ ಪೊಲೀಸರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಪೊಲೀಸರಲ್ಲೂ ಕೆಲವರು ಚಳುವಳಿ ಸೇರಲು ಬರುತ್ತಿದ್ದಾರೆ.

ಫ್ಯಾಕ್ಟರಿ ಕಾರ್ಮಿಕರಲ್ಲಿ ಮನವಿ: ನೀವು ಮಾಡಿದ ರಿವಾಲ್ವರ್‌ಗಳನ್ನು ನಿಮ್ಮ ಸೋದರರನ್ನೇ ಕೊಲ್ಲಲು ಬಳಸಲಾಗುತ್ತಿದೆ... ರಿವಾಲ್ವರ್ ಫ್ಯಾಕ್ಟರಿ ಬಿಟ್ಟು ಸ್ವಾತಂತ್ರ್ಯ ಚಳುವಳಿ ಸೇರಿಕೊಳ್ಳಲು ನಿಮ್ಮನ್ನು ಸಧ್ಯದಲ್ಲೇ ಕರೆಯುತ್ತೇವೆ... ಸ್ವತಂತ್ರ ಭಾರತದಲ್ಲಿ ನೀವು ಗುಲಾಮರಾಗಿರುವುದಿಲ್ಲ; ಗೌರವದ ಬಾಳನ್ನು ಬಾಳುತ್ತೀರಿ.

20 ಅಕ್ಟೋಬರ್ 1942. ತರಂಗಾಂತರ: 42.34 ಮೀಟರ್ಸ್. ಧ್ವನಿ: ಗಂಡು. ಭಾಷೆ: ಹಿಂದೂಸ್ತಾನಿ. ಸಮಯ: 8.45–9.10.

ಭಾರತದಲ್ಲಿ ಸುದ್ದಿಗಳ ಮೇಲೆ ನಿರ್ಬಂಧ ಹೇರಲಾಗಿದೆ. ಭಾರತಕ್ಕೆ ಬರುತ್ತಿರುವ ಸುದ್ದಿ ಸೆನ್ಸಾರ್ ಆಗುತ್ತಿದೆ. ಭಾರತದಿಂದ ಹೋಗುತ್ತಿರುವ ಸುದ್ದಿ ಸೆನ್ಸಾರ್ ಆಗುತ್ತಿದೆ! ಒಂದು ಪ್ರಾಂತದ ಸುದ್ದಿ ಇನ್ನೊಂದು ಪ್ರಾಂತಕ್ಕೆ ಗೊತ್ತಾಗುತ್ತಿಲ್ಲ. ಪತ್ರಿಕಾ ಸುದ್ದಿಗಳನ್ನು ಸೆನ್ಸಾರ್ ಅಧಿಕಾರಿಗಳು ಕತ್ತರಿಸುತ್ತಿದ್ದಾರೆ...

... ಈಗ ಪೊಲೀಸರು ಕೂಡ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಪೊಲೀಸರ ಸಹಾಯದಿಂದ ಕೂಡ ಸ್ವಾತಂತ್ರ್ಯ ಹೋರಾಟಗಾರರು ಜೈಲಿನಿಂದ ತಪ್ಪಿಸಿಕೊಳ್ಳುತ್ತಿದ್ದಾರೆ!

1 ನವಂಬರ್ 1942. ತರಂಗಾಂತರ: 41.42 ಮೀಟರ್ಸ್. ಧ್ವನಿ: ಗಂಡು. ಭಾಷೆ: ಹಿಂದೂಸ್ತಾನಿ. ಸಮಯ: 8.45–9.15.

... ಲೋಕ್‌ಪುರ್ ಹಾಗೂ ದಿಲ್ಲಿ ಊರುಗಳಲ್ಲಿ ಜನ ಭತ್ತದ ಗಾಡಿಗಳನ್ನು ಲೂಟಿ ಮಾಡಿದರು. ಮಹಿಳೆಯರೂ ಈ ಲೂಟಿಯಲ್ಲಿ ಪಾಲ್ಗೊಂಡರು! ಶಾಂತಿಪುರದಲ್ಲಿ ಜನ ಅಕ್ಕಿ ಮೂಟೆಗಳ ಗಾಡಿಯನ್ನು ಲೂಟಿ ಮಾಡಿದರು. ಇಂಥ ಬಂಡಾಯಗಳು ಭಾರತದಾದ್ಯಂತ ನಡೆಯುತ್ತಿವೆ. ನಮ್ಮ ಮಹಿಳೆಯರೂ ಇದರಲ್ಲಿ ಭಾಗಿಯಾಗುತ್ತಿದ್ದಾರೆ. ಮುನ್ನುಗ್ಗಿ ಸೋದರಿಯರೇ...

ಹಾಡು: ವಂದೇ ಮಾತರಂ...

ಟಿಪ್ಪಣಿ: ಇಂಗ್ಲಿಷ್ ಸುದ್ದಿ ಪ್ರಸಾರದಲ್ಲಿ ಅಡಚಣೆ ಇವು ಕಾಂಗ್ರೆಸ್ ರೇಡಿಯೊದ ಕೆಲವು ತುಣುಕುಗಳು ಮಾತ್ರ!

ಕಾಂಗ್ರೆಸ್ ರೇಡಿಯೊ ಆಗಸ್ಟ್ ತಿಂಗಳಲ್ಲಿ ಬೆಳಗ್ಗೆ ಮತ್ತು ರಾತ್ರಿ ಪ್ರಸಾರವಾಗುತ್ತಿತ್ತು. ಎಲ್ಲೋ ಒಂದೆರಡು ದಿನ ಬಿಟ್ಟರೆ ಪ್ರತಿ ರಾತ್ರಿ ಪ್ರಸಾರವಾಗತೊಡಗಿತು. ಇದ್ದಕ್ಕಿದ್ದಂತೆ ಹೆಣ್ಣು ದನಿಯೊಂದು 'ಇದು ಕಾಂಗ್ರೆಸ್ ರೇಡಿಯೊ! ಭಾರತದ ಯಾವುದೋ ಭಾಗದಿಂದ ನಾವು ಮಾತಾಡುತ್ತಿದ್ದೇವೆ!' ಎಂದು ಬಾನುಲಿಯಲ್ಲಿ ಘೋಷಿಸುವುದು; ಹೆಣ್ಣು ದನಿಯ ಪ್ರಕಟಣೆ ಮುಗಿದ ತಕ್ಷಣ ಗಂಡಿನ ದನಿಯಲ್ಲಿ ಚಳುವಳಿಗೆ ಮಾರ್ಗದರ್ಶನ; ಬ್ರಿಟಿಷ್ ಹಿಂಸೆಗಳ ವರದಿ, ಕೆಲವೊಮ್ಮೆ ಕೇಳುಗರ ಪ್ರಶ್ನೆಗಳಿಗೆ ಪ್ರಸಾರಕಾರರ ಉತ್ತರ... ಇದು ಜನರಿಗೆ ರೂಢಿಯಾಗತೊಡಗಿತು. ರೇಡಿಯೊ ಪ್ರಸಾರಕ್ಕಾಗಿ ಜನ ಕಾತರದಿಂದ ಕಾಯತೊಡಗಿದರು.

ಅತ್ತ ಬ್ರಿಟಿಷ್ ಸರ್ಕಾರದ ಪೊಲೀಸರು ಈ ಪ್ರಸಾರದ ಮೂಲ ಹುಡುಕಲು ಊರು ಸುತ್ತತೊಡಗಿದ್ದರು!

ಹಿಂದೂಸ್ತಾನಿ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಆರಂಭಗೊಳ್ಳುತ್ತಿದ್ದ ರೇಡಿಯೊ ಪ್ರಕಟಣೆ ತನ್ನನ್ನು ತಾನು 'ಕಾಂಗ್ರೆಸ್ ರೇಡಿಯೊ', 'ಫ್ರೀಡಂ ರೇಡಿಯೊ', 'ಆಝಾದಿ ರೇಡಿಯೊ' ಎಂದು ಕರೆದುಕೊಳ್ಳುತ್ತಿತ್ತು. ಬ್ರಿಟಿಷರು ಭಾರತಕ್ಕೆ ತಂದ ಬಾನುಲಿ ಇದೀಗ ಅವರಿಗೇ ತಿರುಮಂತ್ರವಾಗಿತ್ತು!

8 ಅಕ್ಟೋಬರ್ 1942. ಬ್ರಿಟಿಷ್ ಸರ್ಕಾರದ ಸಿಐಡಿ ಸ್ಪೆಷಲ್ ಬ್ರಾಂಚ್ ಕಾಂಗ್ರೆಸ್ ರೇಡಿಯೊವನ್ನು ಮಾನಿಟರ್ ಮಾಡಲಾರಂಭಿಸಿತು. ಈ ಪ್ರಸಾರಗಳ ವಿವರಗಳನ್ನು ಪೊಲೀಸ್ ಸ್ಟೆನೋಗ್ರಾಫರುಗಳು ಬರೆದುಕೊಳ್ಳಲಾರಂಭಿಸಿದರು. ಪ್ರಸಾರದ ಗುಣಮಟ್ಟದಲ್ಲಿ ಏರುಪೇರಾಗುತ್ತಿತ್ತು; ಎಷ್ಟೋ ಸಲ ಪೊಲೀಸರಿಗೆ ಆ ಮಾತುಗಳನ್ನು ಬರೆದುಕೊಳ್ಳುವುದು ಕಷ್ಟವಾಗುತ್ತಿತ್ತು.

ರಾತ್ರಿ ಎಲ್ಲಿಂದಲೋ ಹಠಾತ್ತನೆ ಬಂದೆರಗುತ್ತಿದ್ದ ಅಶರೀರವಾಣಿಯನ್ನು ಬ್ರಿಟಿಷ್ ಪೊಲೀಸರು **'Illegal ಕಾಂಗ್ರೆಸ್ ರೇಡಿಯೊ'** ಎಂದು ಕರೆದರು! ಕಾರಣ, ಬ್ರಿಟಿಷ್ ಸೆನ್ಸಾರ್‌ಗೆ ತುತ್ತಾದ ಪತ್ರಿಕೆಗಳಲ್ಲಿ ಅಥವಾ ಬ್ರಿಟಿಷ್ ತುತ್ತೂರಿಯಾಗಿದ್ದ ಸರ್ಕಾರಿ ರೇಡಿಯೊದಲ್ಲಿ ಪ್ರಕಟವಾಗದ ಸುದ್ದಿಗಳು ಕಾಂಗ್ರೆಸ್ ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದವು. ಮೇಲೆ ಕೊಟ್ಟಿರುವ ತುಣುಕುಗಳು ಪೊಲೀಸರು ಬರೆದುಕೊಳ್ಳುತ್ತಿದ್ದ ಕಾಂಗ್ರೆಸ್ ರೇಡಿಯೊದ ಸುದ್ದಿಯ ಭಾಗಗಳು. ಅನೇಕ ಸಲ ಪ್ರಸಾರ ಅಸ್ಪಷ್ಟವಾಗಿ ಪೊಲೀಸರು ಸುದ್ದಿಯ ಸಾರಾಂಶ ಬರೆದುಕೊಂಡಿದ್ದೂ ಉಂಟು.

ಈ ಬಾನುಲಿ ಪ್ರಸಾರಗಳಲ್ಲಿ ಎಲ್ಲೂ ವರದಿಯಾಗದ ಪೊಲೀಸ್ ಹಿಂಸೆ, ಜನರ ಹೋರಾಟಗಳ ವಿವರಗಳಿರುತ್ತಿದ್ದವು. ಮುಂಬೈ, ನಾಸಿಕ್, ಕಲ್ಕತ್ತಾಗಳ ಗುಪ್ತ ಕೇಂದ್ರಗಳಿಂದ ಕಾಂಗ್ರೆಸ್ ರೇಡಿಯೊ ಬಿತ್ತರವಾಗುತ್ತಿತ್ತು.

1942ರ ಅಕ್ಟೋಬರ್ ತಿಂಗಳಿನಿಂದ ಬಾಂಬೆ ಬ್ರಿಟಿಷ್ ಸರ್ಕಾರದ ಅಡಿಷನಲ್ ಸೆಕ್ರೆಟರಿ ಎಚ್.ವಿ.ಆರ್. ಅಯ್ಯಂಗಾರ್ ಕಾಂಗ್ರೆಸ್ ರೇಡಿಯೊ ಪ್ರಸಾರಗಳನ್ನು ಕೇಳಿಸಿಕೊಳ್ಳತೊಡಗಿದ. ಈ ರೇಡಿಯೊದ ಮೂಲಕ ಪ್ರಸಾರವಾಗುತ್ತಿದ್ದ ಸುದ್ದಿ, ವಿಶ್ಲೇಷಣೆಗಳ ವಿಷಯ, ಭಾಷೆ, ಧೋರಣೆ, ತಾತ್ವಿಕತೆ, ಉದ್ದೇಶಗಳನ್ನು ಹದ್ದಿನ ಕಣ್ಣಿನಿಂದ 'ಅಧ್ಯಯನ' ಮಾಡತೊಡಗಿದ; ಕಾಂಗ್ರೆಸ್ ರೇಡಿಯೊ ಪ್ರಸಾರದ ಬಗ್ಗೆ ಬ್ರಿಟಿಷ್ ಅಧಿಕಾರಿ ಸ್ಕಾಟ್ ತಯಾರಿಸಿದ್ದ ವರದಿಗಳನ್ನೂ ಅಯ್ಯಂಗಾರ್ ಓದಿಕೊಂಡ.

ತನ್ನ ಅಧ್ಯಯನ ಹಾಗೂ ಸ್ಕಾಟ್ ವರದಿಯ ಆಧಾರದ ಮೇಲೆ, 'ಈ ಪ್ರಸಾರದಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಫಿಲಾಸಫಿ ಇದೆ' ಎಂದು ತೀರ್ಮಾನಿಸುತ್ತಾ ಅಯ್ಯಂಗಾರ್ ಒಕ್ಕಣೆ ಬರೆದ: 'ಖಾಸಗಿ ಮೂಲಗಳು ಸೂಚಿಸುವಂತೆ, ಭೂಗತವಾಗಿರುವ ಕಾಂಗ್ರೆಸ್ ಸೋಷಲಿಸ್ಟ್ ರಾಮಮನೋಹರ ಲೋಹಿಯಾ ಈ ಪ್ರಸಾರಗಳ ಮೂಲ ಪ್ರೇರಣೆ; ಇದಕ್ಕೆ ಪುರಾವೆಗಳೂ ಇವೆ.'

ತನ್ನ ತೀರ್ಮಾನಕ್ಕೆ ಪುರಾವೆಯಾಗಿ ಗಂಡು ದನಿಯ ಬಾನುಲಿ ಪ್ರಸಾರಗಳಲ್ಲಿ ಇದ್ದ ಕೆಲ ಬಗೆಯ ವಾಕ್ಯಗಳನ್ನು ಸಾಹಿತ್ಯ ವಿಮರ್ಶಕನಂತೆ ಅಯ್ಯಂಗಾರ್ ಹೆಕ್ಕಿ ತೋರಿಸಿದ:

'ದುಡಿಯುವ ವರ್ಗವನ್ನು, ರೈತಾಪಿಗಳನ್ನು ಗುಲಾಮರಾಗಿಸುವ ಪಶ್ಚಿಮದ ಪ್ರಜಾಪ್ರಭುತ್ವದ ಕಹಿ ಪಾಠಗಳನ್ನು ನಾವು ಕಲಿತಿದ್ದೇವೆ.'

'ಸ್ವತಂತ್ರ ಇಂಡಿಯಾ ರೈತರ, ಕಾರ್ಮಿಕರ, ಕೂಲಿಕಾರರ ಇಂಡಿಯಾ ಆಗಿರುತ್ತದೆ.'

'ಸ್ವಾತಂತ್ರ್ಯಕ್ಕೋಸ್ಕರ ಕ್ರಾಂತಿ ಎಂದರೆ ಬಡವರಿಗಾಗಿ ಕ್ರಾಂತಿ.'

ಒಂದೆಡೆ ಭಾರತದ ಜನತೆ ಬ್ರಿಟಿಷರ ವಿರುದ್ಧ ಜೀವದ ಹಂಗು ತೊರೆದು ಹೋರಾಡುತ್ತಿತ್ತು; ಮತ್ತೊಂದೆಡೆ ಭಾರತದ ನವ ಶಿಕ್ಷಿತ ಬುದ್ಧಿವಂತರ ಕುಲೀನ ವರ್ಗ ಅಪಾರ ಭಯಭಕ್ತಿಯಿಂದ ಬ್ರಿಟಿಷರ ಸೇವೆ ಮಾಡುತ್ತಿತ್ತು! ಇದಕ್ಕೆ ಈ ಅಯ್ಯಂಗಾರ್ 'ಅಧ್ಯಯನ' ಒಂದು ಪುಟ್ಟ ಉದಾಹರಣೆ! ಈತನ ವರದಿಗಳ ಆಧಾರದ ಮೇಲೆ 'ಇದು ಸೋಷಲಿಸ್ಟರ ಕ್ರಾಂತಿಕಾರಿ ಚಳುವಳಿ' ಎಂದು ಬ್ರಿಟಿಷ್ ಸರ್ಕಾರ ತೀರ್ಮಾನಿಸಿತು.

ಆದರೂ ಪ್ರಸಾರ ಶುರುವಾಗಿ ಮೂರು ತಿಂಗಳವರೆಗೂ ಸರ್ಕಾರಿ ಬೇಹುಗಾರರಿಗೆ ಈ ಭೂಗತ ರೇಡಿಯೊವನ್ನು ಪತ್ತೆ ಹಚ್ಚಲಾಗಿರಲಿಲ್ಲ. ಪ್ರಸಾರದ ಜಾಗ ಪತ್ತೆಯಾದರೂ ಪೊಲೀಸರು ತಲುಪುವಷ್ಟರಲ್ಲಿ ಪ್ರಸಾರಕಾರರು ಅಲ್ಲಿರುತ್ತಿರಲಿಲ್ಲ. ಸಾಮಾನ್ಯ ಜನ ಕೂಡ ಈ ದೇಶಭಕ್ತ ತಂಡವನ್ನು ರಕ್ಷಿಸುತ್ತಿದ್ದರು.

ಈ ಭೂಗತ ರೇಡಿಯೊದ ಐಡಿಯಾ ರೂಪಿಸಿದ ಲೋಹಿಯಾ ಅಲ್ಲಿ ಇಲ್ಲಿ ಹಣಕಾಸನ್ನೂ ಕಲೆ ಹಾಕಿದ್ದರು. ವಿಠ್ಠಲದಾಸ್ ಅಲಿಯಾಸ್ ಭಾಹುಭಾಯ್ ಈ ರೇಡಿಯೊ ಸಾಹಸದ ಮುಖ್ಯ ನಿರ್ವಾಹಕ; ವೈರ್‌ಲೆಸ್ ಎಕ್ಸ್‌ಪರ್ಟ್ ನಾನಕ್ ಘರ್‌ಚಂದ್ ಮೋತ್ವಾನೆ ಇದರ ತಾಂತ್ರಿಕ ನಿರ್ವಾಹಕ. ಕಟ್ಟಾ ಕಾಂಗ್ರೆಸ್ಸಿಗ ವಿಠ್ಠಲದಾಸ್ ಜವೇರಿ, ಚಂದ್ರಕಾಂತ ಜವೇರಿ, ಜಗನ್ನಾಥ ಠಾಕೂರ್, ನಾರಿಮನ್ ಈ ರೇಡಿಯೊ ತಂಡ ಸೇರಿಕೊಂಡರು.

ಈ ತಂಡಕ್ಕೆ ಉಷಾ ಮೆಹ್ತಾ ಎಂಬ ಧೀರ ತರುಣಿಯೂ ಸೇರಿಕೊಂಡಳು; ಅಷ್ಟೇ ಅಲ್ಲ, ಈ ಪ್ರಸಾರ ಸಾಹಸದ ಮುಂಚೂಣಿ ನಿರ್ವಾಹಕಿಯೂ ಆದಳು! ಸ್ವಾತಂತ್ರ್ಯ ಚಳುವಳಿಯ ಸ್ಫೂರ್ತಿಯಿಂದಲೇ ಒಡಮೂಡಿದ್ದ ಉಷಾ ಮೆಹ್ತಾ ಎಂಥದೇ ಸವಾಲಿನ ಪರಿಸ್ಥಿತಿಯಲ್ಲೂ ಭೂಗತ ಕಾಂಗ್ರೆಸ್ ರೇಡಿಯೊದ ಸುದ್ದಿ, ವಿಶ್ಲೇಷಣೆಗಳನ್ನು ಪ್ರಸಾರ ಮಾಡಬಲ್ಲ ಚಾಲಾಕಿ ತರುಣಿಯಾಗಿದ್ದಳು...

ಸರಿ! ಯಾರು ಈ ಉಷಾ ಮೆಹ್ತಾ?

(ಸಶೇಷ)